# ಪಠ್ಯ ಪೂರಕ

**4. ಮಗಳಿಗೆ ಬರೆದ ಪತ್ರ – ಮೂಲ : ಜವಹರಲಾಲ್ ನೆಹರು**
**ಅನುವಾದ: – ತಿ.ತಾ. ಶರ್ಮ, ಸಿದ್ದನಹಳ್ಳಿ ಕೃಷ್ಣಶರ್ಮ**

## ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. **ಈ ಪತ್ರವನ್ನು ನೆಹರುರವರು ಯಾರಿಗೆ ಬರೆದಿದ್ದಾರೆ?**

**ಉತ್ತರ** : ನೆಹರು ಅವರು ಈ ಪತ್ರವನ್ನು ಅವರ ಮಗಳಾದ ಇಂದಿರಾ ಪ್ರಿಯದರ್ಶಿನಿ ಅವರಿಗೆ ಬರೆದಿದ್ದಾರೆ.

2. **ಹೂಯಾನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?**

**ಉತ್ತರ** : ಜ್ಞಾನಾರ್ಜನೆ, ವಿವೇಕಸಾಧನೆಗಾಗಿ ಚೀನಾದೇಶದಿಂದ ಭರತ ಖಂಡಕ್ಕೆ ಹಿಯಾನ್‌ತ್ಸಾಂಗ್ ಬಂದನು.

3. **ನಲಂದ ವಿಶ್ವವಿದ್ಯಾನಿಲಯವು ಎಲ್ಲಿತ್ತು?**

ಉತ್ತರ : ನಲಂದಾ ವಿಶ್ವವಿದ್ಯಾನಿಲಯ **ಪಾಟಲೀಪುತ್ರದ** ಬಳಿ ಇತ್ತು. ಈಗ ಅದನ್ನು ಪಾಟ್ನಾ ಎಂದು ಕರೆಯುವರು.

4. **ದಕ್ಷಿಣ ದೇಶದಿಂದ ಬಂದ ಯಾತ್ರಿಕ ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದನು?**

**ಉತ್ತರ** : ದಕ್ಷಿಣ ದೇಶದಿಂದ ಬಂದ ಯಾತ್ರಿಕನು **"ನನ್ನ ಜ್ಞಾನವಷ್ಟಿದೆ. ಈ ತಾಮ್ರದ ರೇಕುಗಳನ್ನು ಬಿಗಿಸದೆಹೋದೆನಾದರೆ ನನ್ನ ಹೊಟ್ಟೆ ಬಿರಿದೀತು. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ 'ಅಯ್ಯೊ' ಅನಿಸುತ್ತದೆ. ಅವರೆಲ್ಲ ಕತ್ತಲೆಯಲ್ಲಿ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯಮೇಲೆ ದೀಪ ಹೊತ್ತಿದ್ದೇನೆ"** ಎಂದು ಹೇಳಿದನು.

5. **ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?**

**ಉತ್ತರ** : ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ; ಕಷ್ಟನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ; ಅವರಿಗೆ ಸಹಾಯಮಾಡಲು ಉಗ್ರ ಆವೇಶದ ಆತುರ ಅವನಿಗೆ. ಆತ ನಮ್ಮ ಜನರಿಗೆಲ್ಲ ಮಹಾತ್ಕಾರ್ಯ ಸಾಧನೆಮಾಡಲೂ, ಗಂಭೀರ ಬಲಿದಾನಮಾಡಲು ಸ್ಫೂರ್ತಿಕೊಡುತ್ತಿದ್ದಾನೆ, ಬಲಿದಾನಮಾಡಿ ನಾವು ಸ್ವಾತಂತ್ರ್ಯಪಡೆಯಬೇಕು, ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು ಆತನಾಸೆ. ಎಂದು ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಈ ರೀತಿ ಹೇಳಿದ್ದಾರೆ.

6. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ?

**ಉತ್ತರ** : ತೆರೆಮರೆಯಲ್ಲಿ ಕೆಲಸ ಮಾಡಿದರೆ **ಭಯವಿದೆ** ಎಂಬ ಅರ್ಥ ಬರುತ್ತದೆ.

1.